(4) ಅಧ್ಯಕ್ಷರ ಅಪ್ಪಣೆ ಮೇರೆಗೆ.

ವಿಷಯ :— ಹಿಪ್ಪರಗಿ ಮತ್ತು ಆಲಮಟ್ಟಿ ಆಣೆಕಟ್ಟು ಎತ್ತರದ ಬಗ್ಗೆ ಮುಖ್ಯಮಂತ್ರಿಗಳ ಪ್ರೆಸ್ ಸೆಕ್ರೆಟರಿಯವರು ಪತ್ರಿಕೆಯಲ್ಲಿ ಹೇಳಿಕೆ ನೀಡಿರುವುದು.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಇಂಪಾರ್‌ಟೆಂಟ್ ಇಷ್ಯೂ ಏನೆಂದರೆ ಹಿಪ್ಪರಗಿ ಬ್ಯಾರೇಜ್, ಮತ್ತು ಆಲಮಟ್ಟಿ ಆಣೆಕಟ್ಟು ಎತ್ತರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರು ಮಹಾರಾಷ್ಟ್ರಕ್ಕೆ ಹೋಗಿದ್ದರು. ಅಲ್ಲಿಗೆ ಹೋಗಿ ಏನು ಮಾತುಕತೆ ಆಡಿದ್ದಾರೋ ಮತ್ತು ಸೌಹಾರ್ದಯುತವಾದ ಒಂದು ಮಾತುಕತೆ ನಡೆದಿದೆ ಎನ್ನುವ ಹೇಳಿಕೆ ಪತ್ರಿಕೆಗಳಲ್ಲಿ ಬಂದಿರುವುದನ್ನೂ ನೋಡಿದ್ದೇವೆ. ಆದರೆ ಇದಕ್ಕಿಂತ ಮುಂಚೆ ಮುಖ್ಯಮಂತ್ರಿಗಳ ಪ್ರೆಸ್ ಸೆಕ್ರೆಟರಿಯವರು ಹೇಳಿಕೆ ಕೊಟ್ಟು ಇದೊಂದು ಐತಿಹಾಸಿಕ ತೀರ್ಮಾನವಾಗಿದೆ, ನಮ್ಮ ಮುಖ್ಯಮಂತ್ರಿಗಳು ಹಿಂದೆ ಯಾರೂ ಮಾಡದೇ ಇರುವುದನ್ನು ಮಾಡಿದ್ದಾರೆ ಎನ್ನುವ ಹೇಳಿಯೂ ಕೂಡ ಪತ್ರಿಕೆಯಲ್ಲಿ ಬಂದಿದ್ದು ಅದು ಮೇಲ್ಮನೆಯಲ್ಲೂ ಕೂಡ ಪ್ರಸ್ತಾಪವಾಗಿದೆ. ಅದಕ್ಕೆ ನಾನು ಹೇಳುತ್ತೇನೆ, ಯಾವುದೇ ಒಂದು ಇಂಥ ವಿಷಯಗಳನ್ನು ಪ್ರಸ್ತಾಪ ಮಾಡುವಾಗ ಅಥವಾ ಹೇಳಬೇಕಾದರೂ ಕೂಡ ಸದನ ನಡೆದಾಗ ಅದನ್ನು ಇಲ್ಲಿಯೇ ಬಂದು ಹೇಳಿಕೆ ಕೊಟ್ಟರೆ ನಮಗೂ ಕೂಡ ಗೊತ್ತಾಗುತ್ತದೆ ಮತ್ತು ಈ ಸದನದ ಮುಖಾಂತರ ಇಡೀ ರಾಜ್ಯದ ಜನತೆಗೂ ಗೊತ್ತಾಗುತ್ತದೆ. ಅದಕ್ಕಿಂತ ಮುಂಚೆ ಒಬ್ಬ ಸೆಕ್ರೆಟರಿಯೇ ಹೇಳಬೇಕೆಂದರೆ ಮತ್ತೆ ನಾವೆಲ್ಲಾ ಏಕೆ ಇಲ್ಲಿ ಇರಬೇಕು ಅಧ್ಯಕ್ಷರೇ? ಇದು ನನಗೇನೂ ಅರ್ಥವಾಗುತ್ತಿಲ್ಲ. ಏಕೆ ಇಷ್ಟು ಆತುರ? ಮಾನ್ಯ ನಾಗೇಗೌಡರೇನೋ ಈಗ ಸುಮ್ಮನೆ ಆಗಿದ್ದಾರೆ. ಇಲ್ಲದೇ ಇದ್ದರೆ ಅವರೇ ಮನಸ್ಸು ಮಾಡುವವರು, ಅವರು ಸುಮ್ಮನಿದ್ದಾರೆ. ಆದರೆ ಅವರು ಸುಮ್ಮನಿದ್ದರೂ ಕೂಡ ಮುಖ್ಯಮಂತ್ರಿಗಳ ಪ್ರೆಸ್ ಸೆಕ್ರೆಟರಿ ಸುಮ್ಮನೆ ಇಲ್ಲವೆಂದರೆ ಇದು ಹೇಗೆ? ಅದಕ್ಕೆ ಅಲ್ಲೇನು ನಡೆಯಿತು? ಯಾವ ರೀತಿಯಾಗಿ ತಾವು ಚರ್ಚೆ ಮಾಡಿದಿರಿ? ಏನು ಪರಿಹಾರವನ್ನು ಕಂಡುಹಿಡಿದಿರಿ? ಆಣೆಕಟ್ಟನ್ನು ಎಷ್ಟು ಎತ್ತರ ಎತ್ತರಿಸುವುದಕ್ಕೆ ತಾವು ಒಪ್ಪಿಕೊಂಡಿರಿ ಎನ್ನುವುದು ನಮಗೆ ಗೊತ್ತಾಗಬೇಕಲ್ಲ. ಇದು ಒಂದು ಎರಡನೆಯದು, ಯಾವ ಕಾರಣಕ್ಕಾಗಿ ಅವರ ಮುಖಾಂತರ ಈ ಹೇಳಿಕೆ ಹೊರಗಡೆ ಬಂತು? ಅದನ್ನು ಏನು ನೀವೇ ಅಥರೈಸ್ ಮಾಡಿದಿರೋ ಅಥವಾ ಅವರಿಗೆ ಹೇಳಿಕೆ ಕೊಡಿ ಎಂದು ಹೇಳಿದರೋ ಎನ್ನುವುದೂ ಕೂಡ ನಮಗೆ ಗೊತ್ತಾಗಬೇಕು. ಮತ್ತು ಈ ರೀತಿಯಾಗಿ ಹೇಳಿಕೆ ಕೊಟ್ಟಿದ್ದರೆ ಅಧ್ಯಕ್ಷರೇ, ತಾವು ಇದನ್ನು ಖಂಡಿಸಬೇಕಾಗುತ್ತದೆ. ಏಕೆಂದರೆ ಪ್ರೆಸ್ ಸೆಕ್ರೆಟರಿಗಳಿಗೆ ಕೊಡಬಹುದು, ಈ ಸದನದಲ್ಲಿ ಆ ಮಾತುಗಳನ್ನು ಹೇಳಬಾರದು ಎಂದರೆ ಅಲ್ಲಿ ರೈಟ್. ಇದು ಸರಿ ಇಲ್ಲ ಎಂದರೆ ತಾವು ಅದನ್ನು ಹೇಳಬೇಕಾಗುತ್ತದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಈಗ ಬಂದಿದ್ದಾರೆ, ಇದರ ಬಗ್ಗೆ ಅವರು ಏನು ಹೇಳುತ್ತಾರೆ ಆಮೇಲೆ ಆಲಮಟ್ಟಿ ಮತ್ತು ಹಿಪ್ಪರಗಿ ಬ್ಯಾರೇಜು

524 ಮೀಟರ್‌ಗೆ ಎತ್ತರಿಸುವುದರಿಂದ ಮಹಾರಾಷ್ಟ್ರ ಜನತೆಗೇನು ತೊಂದರೆಯಾಗುತ್ತದೆ, ತಾವೇನು ಒಪ್ಪಿಕೊಂಡು ಬಂದಿದ್ದೀರಿ? ಯಾವ ಪ್ಯಾಕೇಜ್ ಡೀಲ್ ನಡೆಯಿತು ಎನ್ನುವುದನ್ನೂ ಕೂಡ ಅವರು ಈ ಸದನಕ್ಕೆ ತಿಳಿಸಿದರೆ ಒಳ್ಳೆಯದಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :— ಮಾನ್ಯ ಅಧ್ಯಕ್ಷರೇ, ನಾವು ಇದರ ಬಗ್ಗೆ ನಿನ್ನೆ ಮೊನ್ನೆ ಇಲ್ಲಿ ಪ್ರಸ್ತಾಪ ಮಾಡಿದೆವು. ಬಹುಶಃ ನಮ್ಮ ಅಪೇಕ್ಷೆ ಏನಿತ್ತು ಎಂದರೆ ಮಹಾರಾಷ್ಟ್ರ ಸರ್ಕಾರದ ಜೊತೆಗೆ ಮಾತುಕತೆಗೆ ಹೋಗುವುದಕ್ಕೆ ಮುಂಚೆಯೇ ಫ್ಲೋರ್ ಲೀಡರ್ಸ್‌ಗಳನ್ನಾದರೂ ಕರೆದು ತಾವು ಪ್ರಸ್ತಾಪ ಮಾಡುವವರಿದ್ದೀರಾ ನಮ್ಮದೇನು ಸಲಹೆ ಎಂದು ನಮ್ಮನ್ನು ಕೇಳುತ್ತಾರೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಸದನಕ್ಕೆ ಬಂದು ನಾವು ಹೋಗುತ್ತಿದ್ದೇವೆ ಎಂದು ತಿಳಿಸಿಯೇ ಹೋಗಿದ್ದಾರೆ ಎನ್ನುವ ಮಾತನ್ನು ನಿನ್ನೆ ಉತ್ತರ ಕೊಡುವ ಕಾಲದಲ್ಲಿ ಹೇಳಿದ್ದೀರಿ. ಆದರೆ ಇದುವರೆಗೆ ಕಾವೇರಿ ಜಲವಿವಾದದ ಯಾವುದೇ ಪ್ರಶ್ನೆ ಬಂದಾಗ ಅಥವಾ ಕೃಷ್ಣಾ ಬೇಸಿನ್, ಈ ರೀತಿ ಅಲಮಟ್ಟಿಯದ್ದು ಯಾವುದೇ ವಿವಾದ ಬಂದಾಗ ನಾವು ಪೂರ್ಣ ರಾಜ್ಯದ ಜನರ ಹಿತದೃಷ್ಟಿಯಿಂದ ಸರ್ಕಾರದ ಜೊತೆಗಿದ್ದೇವೆ, ಎಲ್ಲಾ ಒಂದಾಗಿ ಇವತ್ತು ಕೆಲಸ ಮಾಡುತ್ತಿದ್ದೇವೆ. ಅವರವರ ರಾಜ್ಯದ ಹಿತದೃಷ್ಟಿಯಿಂದ ಸರ್ವೇಸಾಮಾನ್ಯವಾದ ವಿಚಾರ. ಆದರೆ ಇವತ್ತು ಸದನ ನಡೆಯುವ ಕಾಲದಲ್ಲಿ ನಿಮ್ಮ ಪ್ರೆಸ್ ಸೆಕ್ರೆಟರಿ ಅಥವಾ ಇನ್ಯಾರೋ ಒಬ್ಬ ಪ್ರತಿನಿಧಿ ಹೇಳಿಕೆಯನ್ನು ಕೊಡುತ್ತಾರೆ ಎನ್ನುವುದಾದರೆ ಈ ಸದನಕ್ಕೆ ಮಾಡಿದ ಅಪಮಾನವಲ್ಲವೇ ಇದು? ಮತ್ತು ನೀವು ಅಲ್ಲಿಗೆ ಹೋಗಿ ಬಂದತಕ್ಷಣ ನನಗನ್ನಿಸುತ್ತದೆ ಮುಖ್ಯಮಂತ್ರಿಗಳು ಇಲ್ಲಿಗೆ ಬರಬೇಕಾಗಿತ್ತು, ಶೂನ್ಯ ವೇಳೆ ಮುಗಿಯುತ್ತಿದ್ದಂತೆ ಅವರೊಂದು ಸ್ಟೇಟ್‌ಮೆಂಟ್ ಮಾಡಿ ಈ ರೀತಿ ಆಗಿದೆ, ಈ ರೀತಿ ನಾನು ಒಪ್ಪಿಕೊಂಡು ಬಂದಿದ್ದೇನೆ, ರಾಜ್ಯದ ಜನರಿಗೆ ಇದು ಒಳ್ಳೆಯದಾಗುವುದು ಇದೆ ಎನ್ನುವ ಮಾಹಿತಿಯನ್ನಾದರೂ ನಮಗೆ ಕೊಡದೆ ಪತ್ರಿಕೆಯ ಮೂಲಕ ನಾವು ಇದನ್ನು ತಿಳಿದುಕೊಳ್ಳುವ ಒಂದು ದುಸ್ಥಿತಿ ನಮಗೆ ಬರುತ್ತದೆ ಎನ್ನುವುದಾದರೆ ಇದು ಎಷ್ಟರಮಟ್ಟಿಗೆ ಸರಿ ದಯಮಾಡಿ ಅದಕ್ಕೋಸ್ಕರ ನಾನು ಅಧ್ಯಕ್ಷರಲ್ಲಿ ಒತ್ತಾಯ ಮಾಡುತ್ತೇನೆ. ಮುಖ್ಯಮಂತ್ರಿಗಳೇ ಬರಲಿ. ಈ ಬಗ್ಗೆ ಏನು ವಾಸ್ತವಿಕವಾಗಿ ಚರ್ಚೆಯಾಯಿತು? ಏನು ಒಪ್ಪಿಕೊಂಡು ಬಂದಿದ್ದೀರಿ? ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್‌ನ್ನು ಮಾಡಬೇಕೆನ್ನುವ ಒತ್ತಾಯವನ್ನು ಈ ಸದನದಲ್ಲಿ ನಾನು ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೇ, ನಾನು ನಿನ್ನೆಯೂ ಇದನ್ನು ಪ್ರಸ್ತಾಪ ಮಾಡಿದೆ. ತಾವು ಇರಲಿಲ್ಲ. ಸಾಮಾನ್ಯವಾಗಿ ಇತ್ತೀಚಿನ ಅನೇಕ ವರ್ಷಗಳಲ್ಲಿ ಹಿಂದಿನ ಮುಖ್ಯಮಂತ್ರಿಗಳು ನಡೆದುಕೊಂಡು ಬಂದಿರುವ ರೀತಿನೀತಿಗಳು ಇಂಥ ರಾಜ್ಯಕ್ಕೆ ಸಂಬಂಧಪಟ್ಟ ಅನೇಕ ವಿಚಾರಗಳನ್ನು ಬೇರೆ ರಾಜ್ಯದ ಜೊತೆಯಲ್ಲಿ ಚರ್ಚೆ ಮಾಡುವಾಗ ಅದನ್ನು ಮಾಡುವುದಕ್ಕೆ ಮುಂಚಿತವಾಗಿ ಮೊದಲು ಇಲ್ಲಿ ವಿರೋಧ ಪಕ್ಷದ ಎಲ್ಲಾ ಈ ಸದನದ ಮುಖಂಡರನ್ನು, ಸರ್ವ ಪಕ್ಷಗಳ ಮುಖಂಡರನ್ನು ಕರೆದು

ಮಾತನಾಡತಕ್ಕಂಥದ್ದು ಮೊದಲಿನಿಂದಲೂ ನಡೆದುಕೊಂಡು ಬಂದಿರತಕ್ಕಂಥದ್ದು ಪ್ರಾಮಾಣಿಕವಾಗಿ ಹಿಂದಿನ ಅನೇಕ ಮುಖ್ಯಮಂತ್ರಿಗಳು ಈ ಕೆಲಸವನ್ನು ಮಾಡಿದ್ದಾರೆ. ಈ ಸಾರಿ ಹೋಗಿರತಕ್ಕಂಥದ್ದು ಮತ್ತು ಅನೇಕ ಸಂದರ್ಭದಲ್ಲಿ ಇದರ ಬಗ್ಗೆ ಬಹಳ ಹೇಳಿದ್ದಾರೆ. ಅನೇಕ ಸಂದರ್ಭದಲ್ಲಿ ಈ ಸರ್ಕಾರ ತಮಿಳುನಾಡಿಗೆ ಹೋದಾಗಲೂ ನಮ್ಮ ಜೊತೆಯೇನೂ ಅವರು ಭೇಟಿ ಮಾಡಲಿಲ್ಲ. ದೆಹಲಿಗೆ ಹೋದಾಗ ಭೇಟಿ ಮಾಡಲಿಲ್ಲ. ಮತ್ತು ಯಾವ ಸಂದರ್ಭದಲ್ಲೂ ವಿರೋಧ ಪಕ್ಷಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ವಿರೋಧಪಕ್ಷ ಈ ರಾಜ್ಯದಲ್ಲಿ ಇಲ್ಲವೇ ಇಲ್ಲ. ನಾವೇ ಆಡಳಿತ ನಡೆಸುತ್ತಿರುವಂಥದ್ದು. ಇದು ಹಾವೇರಿ ಇರಬಹುದು, ಅಲಮಟ್ಟಿ ಇರಬಹುದು, ಈ ರೀತಿಯ ತೀರ್ಮಾನಕ್ಕೆ ಬಂದಿದ್ದಾರೆ. ನಾನು ತಮಗೇನು ಹೇಳುತ್ತಿದ್ದೇನೆಂದರೆ ನಿನ್ನೆ ಬಹಳ ಪ್ರಾಮುಖ್ಯವಾದ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಹೇಳುವುದಕ್ಕೆ ಮುಂಚೆ ನಮ್ಮನ್ನೆಲ್ಲಾ ಕರೆಸಿ ಮಾತನಾಡಬೇಕಾಗಿತ್ತು. ಯಾವ ಮಟ್ಟದಲ್ಲಿ ನಾವು ಹೋಗುತ್ತಿದ್ದೇವೆ, ಯಾವ ಯಾವ ರೀತಿಯಲ್ಲಿ ನಾವು ಮಾತನಾಡುತ್ತೇವೆಂದು ಹೇಳಬೇಕಾಗಿತ್ತು. ಅದೆಲ್ಲವನ್ನೂ ಗಾಳಿಗೆ ತೂರಿದರು. ಈಗ ಅಲ್ಲೇನು ಸಧ್ಯ ಮಾತುಕತೆ ಬಹಳ ಚೆನ್ನಾಗಿ ನಡೆದಿದೆ. ನಮಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಮಾತುಕತೆ ನಡೆದಿದೆ ಎನ್ನುವ ಒಂದು ಹೇಳಿಕೆ ಮಾನ್ಯ ಮುಖ್ಯಮಂತ್ರಿಗಳಿಂದ ಬಂದಿದ್ದು ಅಲ್ಲ. ನೀರಾವರಿ ಸಚಿವರಿಂದ ಬಂದಿದ್ದು ಅಲ್ಲ. ಪತ್ರಿಕಾ ಕಾರ್ಯದರ್ಶಿಯವರು ಇದನ್ನು ಹೇಳಬೇಕಾದರೆ ನನಗನ್ನಿಸುತ್ತದೆ, ಅವರೇ ಸ್ವತಂತ್ರವಾಗಿ ಹೇಳಿದ್ದಾರೆ ಎಂದು ನಾನಂದುಕೊಂಡಿಲ್ಲ. ಹೇಳಿಬಿಡಿ, ನೀವೊಂದು ಕರ್ನಾಟಕದಲ್ಲಿ ಪತ್ರಿಕಾ ಹೇಳಿಕೆ ಕೊಟ್ಟುಬಿಡಿ, ಕರ್ನಾಟಕಕ್ಕೆ ಹೋಗಿ ಈ ರೀತಿ ಹೇಳಿಕೆ ಕೊಟ್ಟುಬಿಡಿ, ನಮ್ಮದೆಲ್ಲಾ ಚೆನ್ನಾಗಿ ಆಗಿದೆ, ನಮಗೆ ಎಲ್ಲಾ ರೀತಿ ಅನುಕೂಲಗಳಾಗಿವೆ ಎನ್ನುವ ಮಾತನ್ನು ಹೇಳಿಬಿಡಿ ಎಂದರೆ ಇದು ಈ ಸದನಕ್ಕೆ ಮಾಡಿದ ಅಗೌರವ ಮತ್ತು ಹಕ್ಕುಚ್ಯುತಿಯಾಗುತ್ತದೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ ಪತ್ರಿಕಾ ಕಾರ್ಯದರ್ಶಿ ಒಬ್ಬರು ತಮಗೆ ಇಚ್ಛಿಬಂದಂತೆ ಹೇಳಿಕೆ ಕೊಡತಕ್ಕಂಥದ್ದು ಏನಿದೆ ಇದು ಮೊದಲನೆಯದು ಹಕ್ಕುಚ್ಯುತಿ. ಇದು ನಿಜವಾಗಿದ್ದರೆ ಮುಖ್ಯಮಂತ್ರಿಗಳ ಮೇಲೂ ಹಕ್ಕುಚ್ಯುತಿ ಬರುತ್ತದೆ ಆದ್ದರಿಂದ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಮಾತ್ರ ನಿಜವಾಗಿಯೂ ಇದು ಸತ್ ಸಂಪ್ರದಾಯವಲ್ಲ, ಕೆಟ್ಟದಾರಿಯಾಗುತ್ತದೆ. ಹಕ್ಕುಚ್ಯುತಿ ಪತ್ರಿಕಾ ಕಾರ್ಯದರ್ಶಿ ಮೇಲೂ ಬರುತ್ತದೆ ಮುಖ್ಯಮಂತ್ರಿಗಳ ಮೇಲೂ ಬರುತ್ತದೆ ಎನ್ನುವ ಮಾತನ್ನು ತಮ್ಮ ಮುಂದೆ ನಾನು ಮನವಿ ಮಾಡುತ್ತಿದ್ದೇನೆ.

+ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :— ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನಾನು ನಿನ್ನೆ ಮಾತನಾಡಿದ್ದೇನೆ. ಅವರ ವಿಷಯದ ಸ್ಪಷ್ಟೀಕರಣವನ್ನು ಕೊಡಬೇಕೆಂದು ಪತ್ರಿಕಾ ಕಾರ್ಯದರ್ಶಿಯವರೂ ಕೂಡ ವಿವರವನ್ನು ಕೊಟ್ಟರು. ಇದರಲ್ಲಿ ಪ್ರಥಮವಾಗಿಯೇ ತಮ್ಮ ಮುಂದೆ ಅರಿಕೆ ಮಾಡಿಕೊಳ್ಳುವುದು ಪತ್ರಿಕಾ ಕಾರ್ಯದರ್ಶಿಯೇ ಆಗಲಿ, ನಾವಾಗಲೀ, ಸರ್ಕಾರವಾಗಲೀ, ಮುಖ್ಯಮಂತ್ರಿಗಳಾಗಲಿ ಯಾವುದೇ ತರಹದ ಅಗೌರವನ್ನು ತರಬೇಕೆಂಬ ದೃಷ್ಟಿ ಇಲ್ಲ. ಇಲ್ಲಿ ಈ ಸದನ ಪರಮೋಚ್ಚವಾದುದು. ಆ ಕಾರಣಕ್ಕಾಗಿಯೇ ಅನೇಕ ಸಂದರ್ಭದಲ್ಲಿ

ನಮ್ಮ ಸಚಿವಸಂಪುಟದ ಸಭೆಗಳು ಆಗಿ ತೀರ್ಮಾನವನ್ನು ಕೈಗೊಂಡರೂ ಕೂಡ ನಾವು ಯಾವುದೇ ಪತ್ರಿಕಾ ಹೇಳಿಕೆಯನ್ನು ಕೊಡುತ್ತಿಲ್ಲ. ಯಾವುದಿದ್ದರೂ ಕೂಡ ಸದನದಲ್ಲಿಯೇ ಅದನ್ನು ಪ್ರಕಟಿಸಬೇಕೆನ್ನುವ ನಿಯಮಕ್ಕೆ ಬದ್ಧವಾಗಿರತಕ್ಕಂಥದ್ದು. ಇಲ್ಲಿ ಮುಂಬೈಯಲ್ಲಿರುವ ಯುಎನ್ಐ ಮತ್ತು ಪಿಟಿಐ ವರದಿಯಲ್ಲಿ ಮುಂಬೈ ಅಥವಾ ಮಹಾರಾಷ್ಟ್ರದ ಮಂತ್ರಿಗಳಿಗೆ ಅನುಗುಣವಾಗುವಂಥ ರೀತಿಯ ಒಂದು ಹೇಳಿಕೆ ಅಲ್ಲಿ ಬಿಡುಗಡೆಯಾಯಿತು. ಅಂದರೆ ಈ ರೀತಿಯಾಗಿ ನೀವು 524 ಮೀಟರ್‌ಗೆ ನೀವು ಕಟ್ಟಿಯನ್ನು ಕಟ್ಟುವುದರಿಂದ ಮಹಾರಾಷ್ಟ್ರ ಭಾಗದಲ್ಲಿರುವ ಹೆಚ್ಚು ಪ್ರದೇಶಗಳು ಮುಳುಗಡೆಯಾಗುತ್ತವೆ, 516 ಮೀಟರ್‌ಗೆ ನೀವು ನಿಲ್ಲಿಸಿದಾಗಲೂ ಕೂಡ ತೊಂದರೆಯಾಗುತ್ತದೆ ಎನ್ನುವ ನಿರ್ಧಾರಕ್ಕೆ ಬಂದಿದ್ದಾರೆ ಎನ್ನುವ ರೀತಿಯಲ್ಲಿ ಪತ್ರಿಕಾ ಹೇಳಿಕೆ ಮುಂಬೈಯಿಂದ ಬಂದದ್ದು. ಈ ವಿಚಾರ ಜಂಟಿ ಕಾರ್ಯದರ್ಶಿಗೆ ಮನವರಿಕೆಯಾದ ತಕ್ಷಣ ಈ ರೀತಿಯಾದ ತಪ್ಪು ಅಭಿಪ್ರಾಯ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದ ನಮ್ಮ ಮುಖ್ಯಮಂತ್ರಿಗಳ ಮಾತುಕತೆ ಸಂಪೂರ್ಣವಾಗಿ ಅದಕ್ಕೆ ವಿರುದ್ಧವಾಗಿರತಕ್ಕಂಥದ್ದು. ತೆಗೆದುಕೊಂಡ ನಿರ್ಣಯವೂ ಕೂಡ ಬಹಳ ಸಾಧುವಾದಂಥ ಮತ್ತು ನಮ್ಮ ಸರ್ಕಾರದ ಹಿತರಕ್ಷಣೆಯನ್ನು ಕಾಪಾಡತಕ್ಕಂಥ ಕನ್ನಡ ನಾಡಿನ ಹಿತರಕ್ಷಣೆಯನ್ನು ಕಾಪಾಡುವ ನಿರ್ಣಯವಾಗಿತ್ತು. ಆದರೆ ಅಲ್ಲಿ ಮೂಲವಾಗಿ ಹೊರಡಿಸಿರುವ ಸುದ್ದಿ ತಪ್ಪು ಅಭಿಪ್ರಾಯಕ್ಕೆ ಎಡೆಕೊಡಬಹುದು ಎನ್ನುವ ರೀತಿಯ ಸ್ಪಷ್ಟೀಕರಣದ ಹೇಳಿಕೆಯನ್ನು ಕೊಟ್ಟಿದ್ದಾರೆ. ತಾವು ಇದನ್ನು ಪರಿಗಣಿಸಬಹುದು. ತಮ್ಮ ಅಪ್ಪಣೆಯನ್ನು ಪಡೆದು ಇಲ್ಲಿ ಓದುತ್ತಿದ್ದೇನೆ.

> "ದಕ್ಷಿಣ ಮುಂಬೈನ ಸಹ್ಯಾದ್ರಿ ಅತಿಥಿಗೃಹದಲ್ಲಿ ನಡೆದ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ ಈ ನಿರ್ಧಾರಕ್ಕೆಗೊಳ್ಳಲಾಗಿತ್ತು. ಇದು ಮುಂಬೈ ಮೂಲದಿಂದ ಬಂದಿರುವಂಥ ಸುದ್ದಿ ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿ ನಾರಾಯಣ ರಾಣೆಯವರು ಅಣೆಕಟ್ಟಿನ ಎತ್ತರ ಹೆಚ್ಚಿಸುವುದಕ್ಕೆ ಮಹಾರಾಷ್ಟ್ರದ ಆಕ್ಷೇಪಣೆಗಳ ಕುರಿತಂತೆ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಜೆ.ಹೆಚ್. ಪಟೇಲ್ ಅವರಿಗೆ ಮನವರಿಕೆ ಮಾಡಿಕೊಟ್ಟರು. ಕರ್ನಾಟಕ ಸರ್ಕಾರ ಈಗಿರುವ 224 ಮೀಟರ್‌ಗಿಂತ ಹೆಚ್ಚು ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸಿದಲ್ಲಿ ಮಹಾರಾಷ್ಟ್ರದ ಗಡಿ ಪ್ರದೇಶಗಳ ರೈತರು ತೀವ್ರ ತೊಂದರೆಗೆ ಒಳಗಾಗುವ ಸಾಧ್ಯತೆ ಇದೆ ಎಂದು ಅವರು ಹೇಳಿದರು. 15 ಮೀಟರ್‌ನಿಂದ 16 ಮೀಟರ್ ಅಷ್ಟು ಎತ್ತರವನ್ನು ಹೆಚ್ಚಿಸಲು ಕರ್ನಾಟಕದ ಸರ್ಕಾರ ಉದ್ದೇಶಿಸಿದ್ದು ಇದರಿಂದ 33 ಸಾವಿರ ಹೆಕ್ಟೇರ್‌ಗೂ ಹೆಚ್ಚು ಭೂಮಿ ಮುಳುಗಡೆಯಾಗುವುದು ಅಲ್ಲದೆ ಮೂರು ಲಕ್ಷ ಜನರು ನಿರ್ವಸಿತರಾಗುವರು. ಜಂಟಿ ಸಮೀಕ್ಷೆ ಆದಷ್ಟು ಬೇಗ ಪೂರ್ಣಗೊಳ್ಳಬೇಕೆಂದು ರಾಣೆಯವರಿಗೆ ಕರ್ನಾಟಕದ ಮುಖ್ಯಮಂತ್ರಿ ತಿಳಿಸಿದರು."

ಎಂದು ಹೇಳಿ ಮುಂಬೈ ಮೂಲದಿಂದ ಹೇಳಿಕೆ ಬಂದಿದೆ. ಆ ಮೂಲದಿಂದ ಬಂದಿರುವ ಹೇಳಿಕೆ ಇದು. ವಾಸ್ತವವಾಗಿ ಆಗಿರತಕ್ಕದ್ದು ಏನಿದೆ ಅದನ್ನು ಹೇಳಿದ್ದಾರೆ.

ಅಧ್ಯಕ್ಷರು :— ದಯಮಾಡಿ ಕುಳಿತುಕೊಳ್ಳಿ. ಇಷ್ಟೂ ಯಾವುದು ಎಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :— ಯಾವುದೇ ವರದಿ ಬರಲಿ. ಸ್ಪಷ್ಟೀಕರಣ ನೀಡಬೇಕಾದವರು ಯಾರು? ಮಾನ್ಯ ಮುಖ್ಯಮಂತ್ರಿಗಳು ನೀಡಬೇಕು, ಇಲ್ಲ ಸಂಬಂಧಪಟ್ಟ ಮಂತ್ರಿಗಳು ನೀಡಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ನಾಗೇಗೌಡರು ಕುಳಿತದ್ದನ್ನು ನಾನು ಗಮನಿಸಿಲ್ಲ.

ಅಧ್ಯಕ್ಷರು :— ಮಾನ್ಯ ಪ್ರಕಾಶ್ ಅವರೇ, ಸಮಯ ವ್ಯರ್ಥ ಆಗುವುದು ಬೇಡ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಮುಖಂಡರುಗಳು ಪ್ರಸ್ತಾಪ ಮಾಡಿದ ವಿಷಯ ಏನು ಅಂದರೆ ಸದನ ಅಧಿವೇಶನ ನಡೆಸುತ್ತಿರತಕ್ಕ ವೇಳೆಗೆ ಒಬ್ಬ ಪತ್ರಿಕಾ ಕಾರ್ಯದರ್ಶಿಯವರು ಹೇಳಿಕೆ ನೀಡತಕ್ಕದ್ದು ಸರಿಯಲ್ಲ., ಸಾಧುವಲ್ಲ. ಅದು ಸದನಕ್ಕೆ ತೋರಿಸತಕ್ಕ ಅಗೌರವ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಮುಂಬೈ ಮೂಲದಿಂದ ಬಂದಿರತಕ್ಕಂಥ ಒಂದು ಸ್ಟೋರಿ ಏನು ಪ್ಲಾಟ್ ಆಗಿರುತ್ತದೆ ಅದಕ್ಕೆ ಸರ್ಕಾರದಿಂದ ಇರಿಗೇಷನ್ ಮಿನಿಸ್ಟರ್ ಅಥವಾ ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಮಾಡಬೇಕಾಗಿತ್ತು. ಆದರೆ Press Secretary to Chief Minister on his own, ನಿನ್ನೆ ಪಾಸಿಟೀವ್ ಸ್ಟೇಟ್‌ಮೆಂಟ್ ಅನ್ನು ಇಂತಹ ಒಂದು ಸೀರಿಯಸ್ ಮ್ಯಾಟರ್‌ನಲ್ಲಿ ಮಾಡಿದ್ದು ತಪ್ಪು. I concur with you ನಿನ್ನೆ ಅಫ್ಟರ್ ಹೌಸ್‌ನಲ್ಲಿ ಮಾನ್ಯ ಕಾನೂನು ಮಂತ್ರಿಗಳು ಕೂಡ ಅಗ್ರಿ ಆಗಿದ್ದಾರೆ. ಆ ತರಹದ ಪದ್ಧತಿಯನ್ನು ಯಾರೂ ಕೂಡ ಅನುಸರಿಸಬಾರದು. ಸದನ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಉದ್ದೇಶ ಬಹಳ ಕ್ಲಿಯರ್ ಆಗಿದೆ. ಅವರು ಮುಂಬೈಗೆ ಹೋಗುವುದಕ್ಕೆ ಮೊದಲು ಈ ಸದನದಲ್ಲಿ ತಮ್ಮ ಇಂಗಿತವನ್ನು ವ್ಯಕ್ತ ಮಾಡಿ ಸದನದ ಅನುಮತಿಯನ್ನು ಪಡೆದು ಆಂಧ್ರದವರ ಧೋರಣೆಗಿಂತಲೂ ಕೂಡ ವಿಭಿನ್ನವಾದಂತಹ ಧೋರಣೆಯನ್ನು ಮಹಾರಾಷ್ಟ್ರದವರು ತಾಳಿದ್ದಾರೆ. ಅಲ್ಲಿಗೆ ಹೋಗಿ ಮಾತುಕತೆ ಫಲಪ್ರದ ಆದರೆ ನಾನು ಅಲ್ಲಿಂದ ವಾಪಸ್ ಬಂದು ನಿಮಗೆ ತಿಳಿಸುತ್ತೇನೆ. ಹಾಗೊಂದು ವೇಳೆ ಆಗಲಿಲ್ಲ. ಎಂದರೆ ಎಲ್ಲಾ ಸರ್ವ ಪಕ್ಷಗಳ ಸದಸ್ಯರ ಸಭೆಯನ್ನು ಕರೆದು ಹೇಳುತ್ತೇನೆ ಎಂದು ಹೇಳಿದರು. ತಾವು ಕಡತ ತೆಗೆಸಿ ನೋಡಬಹುದು. ಮಾನ್ಯ ಮುಖ್ಯಮಂತ್ರಿಗಳ ಉದ್ದೇಶ ಬಹಳ ಸ್ಪಷ್ಟ ಇದೆ. ಅವರಿಗೆ ಈ ಸದನಕ್ಕೆ ಅಗೌರವ ಮಾಡಬೇಕು ಎನ್ನುವ ಉದ್ದೇಶ ಇಲ್ಲ. ಈ ಪತ್ರಿಕಾ ಕಾರ್ಯದರ್ಶಿಗಳು ಯಾರು ಇಂತಹ ವಿಚಾರದಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಅದು ಸಾಧು ಅಲ್ಲ ಎನ್ನುವುದನ್ನು ನಾನೂ ಸಹ ಒಪ್ಪುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :— ಅದರ ಬಗ್ಗೆ ನಾನು ಒಪ್ಪಿದೆ. ಅದು ಸಾಧುವಾದುದು ಅಲ್ಲ. ಅವರು ರಾತ್ರಿ ಬಂದಿರತಕ್ಕ ಸುದ್ದಿಗೊತ್ತಾದ ತಕ್ಷಣವೇ ಜನಗಳಲ್ಲಿ ತಪ್ಪು ಅಭಿಪ್ರಾಯ ಬರಬಹುದು ಏನ್ನುವ ಕಾರಣಕ್ಕಾಗಿ ಆತುರ ತೋರಿಸಿದ್ದಾರೆ. ಆದರೆ ದುರುದ್ದೇಶ ಎನ್ನತಕ್ಕದ್ದು ಇಲ್ಲ.

ಶ್ರೀ ಮಾಟಾಳ್ ನಾಗರಾಜ್ :— ಅದಕ್ಕೆ ಸ್ಪಷ್ಟೀಕರಣ ನೀಡಬೇಕಾದವರು ಸಂಬಂಧಪಟ್ಟ ಸಚಿವರು ಯಾರು ಇದ್ದಾರೆ ಅವರು ಅಥವಾ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಅವರು ಸ್ಪಷ್ಟೀಕರಣ ನೀಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರು ಹೇಳಿಕೆ ಕೊಡಲು ಅಥಾರಿಟಿ ಅಲ್ಲ. ಅದನ್ನು ಕ್ಷಮೆ ಮಾಡುವ ಹಾಗೆ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ :— ನಾವು ಆ ಮನುಷ್ಯನ ಉದ್ದೇಶದ ಹಿನ್ನೆಲೆಯಲ್ಲಿ ಸದನ ಅವರನ್ನು ಕ್ಷಮಿಸಬೇಕು ಎಂದು ಕೇಳುತ್ತಿದ್ದೇನೆ. ನಾವು ಕ್ಷಮಾಪಣೆಯನ್ನು ಕೇಳುತ್ತಿದ್ದೇವೆ. ಇದಕ್ಕಿಂತ ಹೆಚ್ಚಿನದು ಹೇಳಬೇಕಾ?

ಅಧ್ಯಕ್ಷರು :— ಆಯಿತು. ಮಾನ್ಯ ಪ್ರಕಾಶ್ ಅವರು ಹೇಳಿದ ಮಾತಿನ ಇಂಗಿತ ಕೂಡ ಅರ್ಥ ಆಗಿದೆ. ಅವರೂ ಕೂಡ ಎಲ್ಲೋ ಒಂದು ಒಳ್ಳೆಯತನದಲ್ಲಿ ಮಾಡಿದ್ದಾರೆ. ಆದರೆ, ಅವರು ಅಧಿಕಾರದ ವ್ಯಾಪ್ತಿಯನ್ನು ಮೀರಿ ಮಾಡಿದ್ದಾರೆ. ಇನ್ನು ಮುಂದಕ್ಕೆ ಅವರು ಆ ರೀತಿ ಮಾಡಬಾರದು ಅಷ್ಟೇ. What has happened is not in good taste..

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಅವರೇ ಸ್ಟೇಟ್‌ಮೆಂಟ್ ಮಾಡಲಿ. He was present there.

Mr. SPEAKER :— Since a long time be has not made any statement. Let him make..

ಶ್ರೀ ಕೆ.ಎನ್. ನಾಗೇಗೌಡ :— ಸಾರ್, ನಾನೇ ಸೋಮೋಟೋ ಸ್ಟೇಟ್ ಮೆಂಟ್ ಮಾಡಬೇಕು ಎಂದು ಆಲೋಚನೆಯಲ್ಲಿದ್ದೆ.

ಅಧ್ಯಕ್ಷರು :— ಈ ಸದನದಲ್ಲಿ ನೀವು ಇತ್ತೀಚೆಗೆ ಹೇಳಿಕೆಯನ್ನೇ ಮಾಡಿಲ್ಲ, ಹೇಳಿಕೆ ಮಾಡಿ,

ಶ್ರೀ ಕೆ.ಎನ್. ನಾಗೇಗೌಡ :— ನಾನು ಸ್ಟೇಟ್‌ಮೆಂಟ್ ಮಾಡಬೇಕು ಎಂದು ಆಲೋಚನೆ ಮಾಡಿದ್ದೆ. ಅಷ್ಟರೊಳಗೆ ಪ್ರಶ್ನೋತ್ತರ ಮುಗಿಯುತ್ತಿದ್ದ ಹಾಗೆ ಮಾನ್ಯ ಖರ್ಗೆಯವರು ವಿಷಯ ಪ್ರಸ್ತಾಪ ಮಾಡಿದ್ದಾರೆ. ತಪ್ಪು ಏನೂ ಅಲ್ಲ. ಸೋಮೋಟೋ ಸ್ಟೇಟ್‌ಮೆಂಟ್ ಮಾಡಬೇಕಾಗಿತ್ತು ಎಂದು ಹೇಳಿದರು. ನಾನು ರೆಡಿ ಆಗಿದ್ದೆ. ಸ್ವಲ್ಪ ಕ್ವೊಶ್ಚನ್ ಅವರ್ ಆಗಲಿ, ಜೀರೋ ಅವರ್ ಆಗಲಿ, ಆಮೇಲೆ ತಮ್ಮ ಅನುಮತಿ ಪಡೆದು ಸ್ಟೇಟ್‌ಮೆಂಟ್ ಮಾಡೋಣ ಎಂದು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ

ಮಾತನಾಡಿದ್ದೆ. ಅವರಿಗೆ ಕೆಲಸ ಇದ್ದರಿಂದ ಇವತ್ತು ಸಾಯಂಕಾಲ ಸ್ಟೇಟ್‌ಮೆಂಟ್ ಮಾಡೋಣ ಎಂದು ಇದ್ದೆ.

ಅಧ್ಯಕ್ಷರು :— ನಿಮ್ಮ ಕಮ್ಯುನಿಕೇಷನ್ ಲೈನ್ ಮೇಯಿಲಿ ಅವರ ಜೊತೆ ಇನ್ನೂ ಇಂಟ್ಯಾಕ್ಟ್ ಇದೆ. ಖಿರ್ಗೆ ಅವರ ಜೊತೆ ಎಸ್ಟಾಬ್ಲಿಷ್ ಆಗಿಲ್ಲ. ಏನು ಕಾರಣ?

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ವಾರ್ತಾ ಸಚಿವರು ಆ ವಿಚಾರವನ್ನು ಕ್ಲಾರಿಫೈ ಮಾಡಿದ್ದಾರೆ, ಆ ವಿಚಾರಕ್ಕೆ ನಾನು ಹೋಗುವುದಿಲ್ಲ. ಒಂದನೇ ತಾರೀಖು ಸುಮಾರು ಒಂದು. ಒಂದೂವರೆ ಗಂಟೆಗಳ ಕಾಲ ಸುದೀರ್ಘವಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳು, ನೀರಾವರಿ ಮಂತ್ರಿಗಳು ಹಾಗೂ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಜೆ.ಎಚ್. ಪಟೇಲ್ ಅವರು ನಮ್ಮ ಗೃಹ ಸಚಿವರಾದಂತಹ ಮಾನ್ಯ ಶಿಂಧೆ ಅವರು, ಉನ್ನತ ಅಧಿಕಾರಿಗಳೆಲ್ಲರ ಜೊತೆ ನಾವು ಸುದೀರ್ಘವಾಗಿ ಚರ್ಚೆ ಮಾಡಿದೆವು. ಅವರಿಗೆ ಇರತಕ್ಕ ಸಂಶಯವನ್ನು ನಿವಾರಣೆ ಮಾಡಿದ್ದೇವೆ.

ಅಧ್ಯಕ್ಷರು :— ನೀವು ಮಾತನಾಡಿದ್ದ ರೆಕಾರ್ಡ್‌ಗೆ ಹೋಗುತ್ತದೆ. ನೀವು ಶಿಂಧೆ ಎಂದು ಹೇಳಿದಿರಿ. ಅವರು ಸಿಂಧ್ಯಾ. ಶಿಂಧೆನೇ ಬೇರೆ, ಸಿಂಧ್ಯಾಸ್ ಬೇರೆ. ಸಿಂಧ್ಯಾ ಅವರೇ, ನಿಮ್ಮದೇನೂ ಆಕ್ಷೇಪಣೆ ಇಲ್ಲವಾ? ರೆಕಾರ್ಡ್‌ಗೆ ಶಿಂಧೆ ಎಂದು ಹೋಗಬಹುದಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಶಿಂಧೆ ಎಂದೇ ನನ್ನ ಹೆಸರು. ಆದರೆ ನಮ್ಮ ಪ್ರಾಥಮಿಕ ಶಾಲೆಯಲ್ಲಿ ನಮ್ಮ ಮಾಸ್ಟರ್ ಅವರು ಸಿಂಧ್ಯಾ ಎಂದು ಹೇಳಿ ಅದು ಅಪಭ್ರಂಶ ಆಗಿದೆ.

ಅಧ್ಯಕ್ಷರು :— ಇವರು ಹೇಗೆ ಅಂದರೆ ಆಕ್ಟರ್ ಕೋರ್ಟ್‌ನಲ್ಲಿದ್ದ ಬ್ರಾಹ್ಮಣನ ಹಾಗೆ. ಹಾಗಾದರೆ ಹಾಗೆ ಸೈ, ಹೀಗಾದರೆ ಹೀಗೆ ಸೈ.

ಶ್ರೀ ಕೆ.ಎಸ್. ನಾಗೇಗೌಡ :— ಸುದೀರ್ಘವಾಗಿ ಎಲ್ಲಾ ವಿಚಾರಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಸಾಧ್ಯ ಇಲ್ಲ ಎಂಬ ಭಾವನೆಯಿಂದ ಒಂದೇ ಒಂದು ವಿಚಾರ ಹೇಳುತ್ತೇನೆ. ಸೂಕ್ಷ್ಮವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಮಹಾರಾಷ್ಟ್ರದವರು ಎತ್ತಿರತಕ್ಕ ಆಕ್ಷೇಪಣೆ ಬಗ್ಗೆ ಚರ್ಚೆ ಮಾಡಿ ಅವರಿಗೆ ಏನು ಸಬ್‌ಮರ್ಜ್ ಆಗಿದೆ ಯಾವ್ಯಾವ ವಿಲೇಜ್‌ಗಳು ಎಷ್ಟು ಇದೆ, ಎಷ್ಟು ಎಕರೆ ಆಗುತ್ತದೆ ಎನ್ನುವ ಬಗ್ಗೆ ನಿಮ್ಮ ಅಪ್ರೈಸೆನ್‌ಷನ್ ಇದು, ಇದು ಫ್ಯಾಕ್ಟ್ಸ್ ಅಲ್ಲ. ಸೆಂಟ್ರಲ್ ವಾಟರ್ ಕಮೀಷನ್ ಅವರು ಜಾಯಿಂಟ್ ಸರ್ವೆ ಮಾಡುವುದಕ್ಕೆ ಒಪ್ಪಿಗೇ ಕೊಟ್ಟಿದ್ದಾರೆ. ಜಾಯಿಂಟ್ ಸರ್ವೆ ಮಾಡುತ್ತಿದ್ದೇವೆ. ಈಗಾಗಲೇ 31, 32 ಕ್ರಾಸ್ ಸೆಕ್ಷನ್ಸ್‌ನಲ್ಲಿ ಆಗಲೇ 26 ಕ್ರಾಸ್ ಸೆಕ್ಷನ್ಸ್ ಸರ್ವೆ ಕೆಲಸ ಮುಗಿದಿದೆ. ಈ ಹಂತದಲ್ಲಿ ನೀವು ಆಕ್ಷೇಪಣೆ ಮಾಡತಕ್ಕದ್ದು ಸರಿಯಲ್ಲ. ಸಿಡಬ್ಲ್ಯೂಸಿ ಅವರು ಮಾಹಿತಿಯನ್ನು ಸಂಪೂರ್ಣವಾಗಿ ಕೊಟ್ಟಿರತಕ್ಕ ಹಿನ್ನೆಲೆ ಒಳಗಡೆ ನೀವು ಜಾಯಿಂಟ್ ಸರ್ವೆ ಆದ ಮೇಲೆ

ಮಾಡಬೇಕು ಎಂದು ಹೇಳಿ ನಮ್ಮ ಮನವಿಯನ್ನು ಮಹಾರಾಷ್ಟ್ರದವರು ಪರಿಗಣಿಸಿದ್ದು ನಿಜ. ನೀವು ಹೇಳಿದ್ದು ಅಪ್ರೆಹೆನ್‌ಷನ್ ಇಲ್ಲ, ಫ್ಯಾಕ್ಟ್ಸ್ ಇದೆ. ನಮಗೆ ಸುಮಾರು 33 ಸಾವಿರ ಹೆಕ್ಟೇರ್ ಮುಳುಗಡೆ ಆಗುತ್ತದೆ. ಸುಮಾರು 1200 ಕೋಟಿ ಇನ್‌ವೆಸ್ಟ್‌ಮೆಂಟ್ ಮಾಡಿ ನಂಬರ್ ಆಫ್ ಲಿಫ್ಟ್ ಇರಿಗೇಷನ್ಸ್ ತೆಗೆದುಕೊಂಡಿದ್ದೇವೆ. ಅದರ ಬೆಡ್ ಲೆವಲ್, ನಿಮ್ಮ ಎಫ್.ಆರ್. ಲೆವೆಲ್ ಟೆಕ್ನಿಕಲ್‌ಆಗಿ ನಿಮಗೆ ಬಹಳ ಸಮಸ್ಯೆ ಇದೆ ಎಷ್ಟಷ್ಟು ಆಕ್ಷೇಪಣೆಯನ್ನು ಅವರು ಎತ್ತಿದರು. ಕೊನೆಗೆ ಅಂತಿಮ ತೀರ್ಮಾನಕ್ಕೆ ಎರಡೂ ರಾಜ್ಯ ಮುಖ್ಯಮಂತ್ರಿಗಳು ಬಂದಿದ್ದು ಏನೆಂದರೆ ಈಗಾಗಲೇ ಜಾಯಿಂಟ್ ಸರ್ವೆ ಆಗುತ್ತಿದೆ. ಜಾಯಿಂಟ್ ಸರ್ವೆ ಕೂಡ ಕೇಂದ್ರ ಸರ್ಕಾರದ ಸೆಂಟ್ರಲ್ ವಾಟರ್ ಕಮೀಷನ್ ಅಧಾರದ ಮೇಲೆ ಆಗುತ್ತಿರತಕ್ಕದ್ದು. ಜಾಯಿಂಟ್ ಸರ್ವೆಯನ್ನು ಎಕ್ಸ್‌ಪಿಡೈಟ್ ಮಾಡಿ, ಅದಷ್ಟು ಬೇಗ ಜಾಯಿಂಟ್ ಸರ್ವೆಯನ್ನು ಮುಗಿಸಿ ಅದನ್ನು ನಾವು ಕಾಂಪ್ಯುಟೇಷನ್ ಮಾಡಿದ ಮೇಲೆ ವಾಸ್ತವಾಂಶ, ನಿಜಾಂಶ ಗೊತ್ತಾಗುತ್ತದೆ. ಅಲ್ಲಿಯವರೆಗೆ ನಾವು ಅಪ್ರೆಹೆನ್‌ಷನ್ ಎನ್ನುವುದು ನೀವು ಫ್ಯಾಕ್ಟ್ಸ್ ಎನ್ನುವುದು ಬೇಡ ಎಂದು ಹೇಳಬೇಕಾಗಿಲ್ಲ. ಅದಷ್ಟು ಬೇಗ ಹೆಚ್ಚು ಇಂಜಿನಿಯರ್ಸ್ ಟೀಮನ್ನು ಎರಡೂ ರಾಜ್ಯಗಳಿಂದ ಜಾಯಿಂಟ್ ಸರ್ವೆಯನ್ನು ಕಂಪ್ಲೀಟ್ ಮಾಡಿ, ಅದರ ಕಾಂಪ್ಯುಟೇಷನ್ ಮಾಡಿ, ಎಷ್ಟು ಎಂಬ ಬಗ್ಗೆ ವಾಸ್ತಾವಾಂಶವನ್ನು ಕಂಡು ಹಿಡಿದ ಮೇಲೆ ಮತ್ತೆ ಕುಳಿತು ಮಾತನಾಡೋಣ ಎಂಬುದು ಆಗಿರತಕ್ಕ ತೀರ್ಮಾನ. ಅಲ್ಲಿಯವರೆಗೆ ನಾವು ಯಾವ ರೀತಿ 25 ವರ್ಷಗಳಿಂದ ಮಹಾರಾಷ್ಟ್ರ ಮತ್ತು ಕರ್ನಾಟಕ ಕೃಷ್ಣಾ ಟ್ರಿಬ್ಯೂನಲ್ ಅವಾರ್ಡ್ ಬರುವ ಮೊದಲು, ಅವಾರ್ಡ್ ಬಂದ ಮೇಲೆ ಇನ್ನೂ ಅನೇಕ ಸಾರಿ ಎರಡೂ ರಾಜ್ಯಗಳು ಪರಸ್ಪರ ಹೊಂದಾಣಿಕೆ ಮಾಡಿಕೊಂಡು ಬಂದಿದ್ದೇವೆ. ಆ ಒಂದು ಹೊಂದಾಣಿಕೆ ಪರಸ್ಪರ ವಿಶ್ವಾಸ, ನಂಬಿಕೆಯಿಂದ ಮುಂದುವರಿಯಬೇಕು ಎನ್ನತಕ್ಕ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಆದ್ದರಿಂದ ಜಾಯಿಂಟ್ ಸರ್ವೆ ಆದ ಮೇಲೆ ವಾಸ್ತವಾಂಶ ಗೊತ್ತಾದ ಮೇಲೆ ಮತ್ತೊಂದು ಸಾರಿ ಚರ್ಚೆ ಆಗುತ್ತದೆ ಎನ್ನುವುದನ್ನು ತಮ್ಮ ಮುಖಾಂತರ ಈ ಸದನಕ್ಕೆ ತಿಳಿಸುತ್ತೇನೆ. ಇನ್ನು ಹೆಚ್ಚು ವಿವರಗಳಿಗೆ ತಾವು ಅವಕಾಶ ಮಾಡಿಕೊಡಬಾರದು. ಏಕೆಂದರೆ ಇದು ಸುಪ್ರೀಂ ಕೋರ್ಟಿನಲ್ಲಿ ಇರುವುದರಿಂದ, ನಾವು ಸುಪ್ರೀಂ ಕೋರ್ಟಿಗೆ ಅರ್ಜಿ ಹಾಕಬೇಕಾದಾಗ ಇಬ್ಬರೂ ಒಟ್ಟಿಗೆ ಕೆಲಸ ಮಾಡಬೇಕಾಗಿದೆ. ಒಟ್ಟಿಗೆ ಕೆಲಸ ಮಾಡಬೇಕಾದ ಹಿನ್ನೆಲೆ ಒಳಗಡೆ ಜಾಯಿಂಟ್ ಸರ್ವೆ ಬಂದ ಮೇಲೆ ಮಾಹಿತಿಯನ್ನು ಸಂಗ್ರಹಣೆ ಮಾಡಿದ ಮೇಲೆ ಕುಳಿತು ಚರ್ಚೆ ಮಾಡಬೇಕು ಎಂದು ತೀರ್ಮಾನ ಆಗಿದೆ. ಅಷ್ಟನ್ನು ಈ ಸದನಕ್ಕೆ ತಿಳಿಸುವುದು ನನ್ನ ಕರ್ತವ್ಯ ಆಗಿತ್ತು. ಮಾನ್ಯ ಮುಖ್ಯಮಂತ್ರಿಗಳೂ ಸಹ ತಾವು ಹೋಗಿ ಸದನದಲ್ಲಿ ತಿಳಿಸಬೇಕು ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅವರು ಇವತ್ತು ಸಂಜೆ ಬರುತ್ತಾರೆ. ಅದನ್ನು ತಮ್ಮ ಮುಖಾಂತರ ಈ ಸದನಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಪತ್ರಿಕಾ ಸಂದರ್ಶನವನ್ನೂ ಸಹ ಮಾಡಲಿಲ್ಲ. ಅವರು ಅಷ್ಟೇ ಅಲ್ಲ,

ಹೇಳಿದ್ದು, ಅವರು ಬೆಂಗಳೂರಿಗೆ ಹೋದ ತಕ್ಷಣವೇ ಎಲ್ಲಾ ಪಕ್ಷಗಳ ನಾಯಕರುಗಳನ್ನು ಕರೆಸುತ್ತೇನೆ ಅಲ್ಲಿ ಏನು ಮಾತುಕತೆ ಆಗಿದೆ, ಅದರ ಬಗ್ಗೆ ನಾನು ತಿಳಿಸುತ್ತೇನೆ ಎಂದರು. ಅದಾದ ನಂತರ ನಾವು ವಾಪಸ್ ಬರುತ್ತೇವೆ ಎನ್ನುವಂತಹ ವಿಚಾರವನ್ನು ಸಹ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಈಗ ಅವರು ಬಂದು ತಿಳಿಸಲಿ. ನಾವು ಮತ್ತೆ ಕುಳಿತು ಬೇಕಾದರೆ ಆಮೇಲೆ ಚರ್ಚೆ ಮಾಡೋಣ. ಎಲ್ಲಾ ವಿರೋಧ ಪಕ್ಷದ ಫ್ಲೋರ್ ಲೀಡರ್ಸ್‌ಅನ್ನು ಕೂಡ ಕನ್‌ಸಲ್ಟ್ ಮಾಡಲಿ. ಆದರೆ ನನ್ನ ವಿಚಾರ ಏನು ಅಂದರೆ ಈ ಹಿಂದೆ ಏನು ಒರಿಜಿನಲ್ ಸೂಟ್‌ಅನ್ನು ಆಂಧ್ರಪ್ರದೇಶದವರು ಫೈಲ್ ಮಾಡಿದ್ದರು, ಆಗ ಇವರು ಅಫಿಡವಿಟ್ ಕೊಡುವಾಗ ಅಥವಾ ಕೌಂಟರ್ ಕೊಡುವಾಗ ಇವ್ಯಾವುದು ಮಾತೂ ಕೂಡ ಇರಲಿಲ್ಲ. ಇವತ್ತೇನು ತಾವು ಚರ್ಚೆ ಮಾಡುತ್ತಿದ್ದೀರಿ. ಈ ಮಾತುಗಳನ್ನು ಅಂದಿನ ಕೌಂಟರ್‌ನಲ್ಲಿ ಅವರು ಹೇಳಿಲ್ಲ. ಒರಿಜಿನಲ್ ಸೂಟ್‌ಗೆ ಕೌಂಟರ್ ಕೊಡುತ್ತಾರೋ ಅಂದಿನ ಕೌಂಟರ್‌ನಲ್ಲಿ ಅವರು ಹೇಳಿಲ್ಲ. ಒರಿಜಿನಲ್ ಸೂಟ್‌ಗೆ ಕೌಂಟರ್ ಕೊಡುತ್ತಾರೋ ಅಥವಾ ಅಫಿಡವಿಟ್ ಕೊಡುತ್ತಾರೋ, ಕೋರ್ಟಿನಲ್ಲಿ ಕೊಡುವಾಗ ಇವ್ಯಾವುದನ್ನೂ ಹೇಳಲಿಲ್ಲ. ಈಗ ಮಾತ್ರ ಹಿಪ್ಪರಗಿ ಬ್ಯಾರೇಜ್ ಅಣೆಕಟ್ಟಿನ ಎತ್ತರ 524 ಮೀಟರ್ ಮಾಡುತ್ತೇವೆಂದಾಗ ಈಗ ಕೆಲಸ ನಡೆಯುತ್ತಿದೆ ಎಂದಾಗ ಮಾತ್ರ ಅವರು ಈ ಪ್ಲೀ ತೆಗೆದುಕೊಂಡಿದ್ದಾರೆ. ಲಕ್ಷಾಂತರ ಜನ ಮುಳುಗಡೆ ಆಗುತ್ತಾರೆ, 330 ಹಳ್ಳಿಗಳು ಹೋಗುತ್ತವೆ. ಇದೊಂದು ಕುಂಟು ನೆಪ ಈಗ ಬಂದಿದೆ. ಇದರ ಹಿಂದೆ ಇದು ಬರಲಿಲ್ಲ. ಅವರಿಗೆ ಒರಿಜಿನಲ್ ಸೂಟ್‌ನಲ್ಲೂ ಹಿಪ್ಪರಗಿ ಬ್ಯಾರೇಜ್ ಇದೆ ಎಂಬುದು ಗೊತ್ತಿತ್ತು. ಅಲ್ಮಟ್ಟಿ ಡ್ಯಾಮ್‌ನಲ್ಲಿಯೂ ನಾವು 524 ಮೀಟರ್ ಎತ್ತರಿಸಲಿಕ್ಕೆ ಕೊಂಡಿದ್ದೇವೆ ಎನ್ನತಕ್ಕದ್ದು ಗೊತ್ತಿತ್ತು. ಸೆಂಟ್ರಲ್ ವಾಟರ್ ಕಮೀಷನ್‌ನಿಂದ ಅಟ್‌ಲೀಸ್ಟ್ 519 ಮೀಟರ್‌ಗೆ ಮೊದಲೇ ಒಪ್ಪಿಗೆ ಕೊಟ್ಟಿದ್ದಾರೆ ಎನ್ನತಕ್ಕದ್ದು ಇದೆ. ಆದರೆ ಈಗ ಸಡನ್ ಆಗಿ ಅವರು ರೈಸ್ ಮಾಡತಕ್ಕದ್ದು ಏಕೆ ಎಂದು ಹೇಳುವುದು ಒಂದು. ಏಕೆಂದರೆ ನೀವು ಅನೇಕ ಸಾರಿ ಮಾತುಕತೆ ಆಡಿಕೊಂಡು ಬರುತ್ತೀರಿ. ಪುನಃ ಅವರು ಮಾಡತಕ್ಕದ್ದೇ ಮಾಡುತ್ತಾರೆ. ಒಂದು ಉದಾಹರಣೆ ನಿಮಗೆ ಹೇಳಬೇಕು ಎಂದರೆ ಶ್ರೀ ಚಂದ್ರಬಾಬು ನಾಯ್ಡು ಅವರ ಜೊತೆಗೆ ತಾವು ಮಾತನಾಡಿದಿರಿ. ಈಗಾಗಲೇ ಅವರು ಗೋದಾವರಿಯಲ್ಲೂ ಕೂಡ ನಮ್ಮ ಕಾಗನಾ ಮತ್ತು ಮಾಧ್ರ ಇವೆರಡಕ್ಕೂ ಅಫೆಕ್ಟ್ ಆಗತಕ್ಕಂಥ ಪ್ರಾಜೆಕ್ಟ್‌ನ್ನು ಅಂದರೆ ಗೋದಾವರಿ ರಿವರ್ ಬೇಸ್‌ನಲ್ಲಿ ಅವರು ಸಬ್ಮಿಟ್ ಮಾಡಿದ್ದಾರೆ. ಗೋದಾವರಿ ಬೇಸಿನ್‌ನಲ್ಲೂ

11.40 ಎ.ಎಂ

ಕೂಡ ಹೊಸ ಪ್ರಾಜೆಕ್ಟ್‌ಗಳನ್ನು ಹಮ್ಮಿಕೊಳ್ಳುವ ಸಲುವಾಗಿ ಈಗಾಗಲೇ ಅವರು ಪ್ಲಾನಿಂಗ್ ಕಮಿಷನ್‌ಗೆ ಮತ್ತು ಸೆಂಟ್ರಲ್ ವಾಟರ್ ಕಮಿಷನ್‌ಗೆ ಪ್ರಪೋಸಲ್ ಅನ್ನು ಸಬ್‌ಮಿಟ್ ಮಾಡಿದ್ದಾರೆ. ಅದರಿಂದ ಈಗ ಏನಾಗುತ್ತದೆಂದರೆ, ನಿಮ್ಮನ್ನು ನಾವು ನಂಬಿಕೊಂಡು ಕುಳಿತರೆ, ಚರ್ಚೆ ಮಾಡಿದರೆ, ಸಮಸ್ಯೆ ಬಗೆಹರಿಯುತ್ತದೆಂದರೆ ಅದನ್ನು ನಾವು ಒಪ್ಪಿಕೊಳ್ಳಬೇಕಷ್ಟೇ

ಹೊರತು ಕಾನೂನು ರೀತ್ಯಾ ಅವರು ಯಾವ ರೀತಿಯಲ್ಲಿ ಮುಂದುವರಿಯುತ್ತಾರೆಂಬುದು ನಿಮಗೇ ಗೊತ್ತಿಲ್ಲ. ನಾನು ಇಲ್ಲಿ ರಾಜಕೀಯ ಮಾಡತಕ್ಕಂಥಾದ್ದು ಏನೂ ಇಲ್ಲ. ನಮಗೆ ಅದು ಬೇಕಾಗಿಲ್ಲ. ಯಾವ ಕಾರಣಕ್ಕಾಗಿ ಈ ಪ್ರಶ್ನೆ ಉದ್ಭವಿಸಿತು? ಅವರು ಸ್ಪೆಷಲ್ ಪಿಟಿಷನ್ ಅನ್ನು ಏಕೆ ಹಾಕಿದರು? ಆಂಧ್ರಪ್ರದೇಶದವರು ಮತ್ತೆ ತೊಂದರೆ ಕೊಡುತ್ತಿದ್ದಾರೆ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ, ಈ ಎರಡೂ ರಾಜ್ಯದವರು ಒಂದಾದ ನಂತರ ಅವರ ಮಧ್ಯದಲ್ಲಿ ನಾವು ಸ್ಯಾಂಡ್‌ವಿಚ್‌ನಂತಾಗುತ್ತೇವೆ. ಆದುದರಿಂದ, ದಯವಿಟ್ಟು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

+ ಶ್ರೀ ಎಂ.ವೀರಪ್ಪ ಮೊಯಿಲಿ (ಕಾರ್ಕಳ) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮತ್ತು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿರುವುದರಲ್ಲಿ ಬಹಳ ಅರ್ಥವಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಕುರಿತಾದ ಚರ್ಚೆಗೆ ಹೋಗುವ ಮೊದಲು ವಿರೋಧಪಕ್ಷಗಳ ಎಲ್ಲಾ ನಾಯಕರುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಏಕೆಂದರೆ, ಇದರಲ್ಲಿ ಸಾಕಷ್ಟು ಆಯಾಮಗಳಿದ್ದು, ಈ ವಿಷಯಕ್ಕೆ ಸಂಬಂಧಪಟ್ಟಂತೆ ಐತಿಹಾಸಿಕ ನಿರ್ಣಯವೂ ಆಗಿದೆ. ಅಂತರರಾಜ್ಯ ನದಿ ವಿವಾದಗಳನ್ನು ಈ ರೀತಿಯಲ್ಲಿಯೇ ಪರಸ್ಪರ ಸಹಕಾರದಿಂದ ತೀರ್ಮಾನ ಮಾಡಬೇಕೆಂಬ ಬಗ್ಗೆ ಐತಿಹಾಸಿಕ ನಿರ್ಣಯವಾಗಿದ್ದು ಅದರಲ್ಲಿ ಬಹಳಷ್ಟು ವಿಚಾರಗಳಿವೆ. ಆಲಮಟ್ಟಿ ಬಗ್ಗೆಯೂ ಇಂತಹುದೇ ಐತಿಹಾಸಿಕ ನಿರ್ಣಯವನ್ನು ತೆಗೆದಕೊಂಡಿದ್ದು ಅದೇನಾಯಿತು ಎಂಬುದು ನಿಮಗೆ ಗೊತ್ತಿದೆ. ಅದೇ ರೀತಿ ಕಾವೇರಿ ನದಿ ನೀರಿಗೆ ಸಂಬಂಧಪಟ್ಟಂತೆ ತೆಗೆದುಕೊಂಡ ಐತಿಹಾಸಿಕ ನಿರ್ಣಯ ಏನಾಯಿತೆಂದು ಗೊತ್ತಿದೆ. We are opening up a pandora's box. ಏಕೆಂದರೆ, ಇವೆಲ್ಲವನ್ನೂ ಒಪ್ಪಿಕೊಂಡಂಥಾದ್ದು. ಇದಕ್ಕೆ ಮಹಾರಾಷ್ಟ್ರ ಸರ್ಕಾರ ಯಾವಾಗ ಆಕ್ಷೇಪಿಸಿದೆ? ಅವರು ಈಗ ಆಕ್ಷೇಪ ಮಾಡುತ್ತಾರೆಂದರೆ ಅವರು ಅಲ್ಲೊಂದು ಹೊಸ ಡ್ಯಾಮನ್ನು ಕಟ್ಟಬೇಕಾಗಿದೆ. ಆ ಕಾರಣ ಅವರಿಗೆ ಎವಿಡೆನ್ಸ್ ಬೇಕಾಗಿದೆ. ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಸಮಿತಿ ನೇಮಿಸಿದಾಗ ಸುಪ್ರೀಂ ಕೋರ್ಟಿಗೆ ಸಲ್ಲಿಸಲು ಎವಿಡೆನ್ಸ್ ಇರಲಿಲ್ಲ. ಆಲಮಟ್ಟಿ ಅಣೆಕಟ್ಟಿನ ಬಗ್ಗೆ ಆಂಧ್ರಪ್ರದೇಶದವರು ಸಲ್ಲಿಸುತ್ತಿದ್ದ ಪಿಟಿಶನ್‌ಅನ್ನು ಡಿಸ್‌ಮಿಸ್ ಮಾಡುತ್ತಾ ಬರುತ್ತಿದ್ದರು. ಯಾವಾಗ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಸಮಿತಿ ನೇಮಿಸಲಾಗಿತ್ತೋ it was an evidence against us. ಇದೊಂದು ತರಹ ಕ್ರಿಮಿನಲ್ ಕೇಸ್ ಇದ್ದಂತೆ. creating self-incriminatory evidence against ourselves. ನಮ್ಮ ವಿರುದ್ಧವಾಗಿ ನಾವೇ ಎವಿಡೆನ್ಸ್ ಮಾಡುವುದಕ್ಕೆ ಏನೇನು ಬೇಕೋ ಅದಕ್ಕೆಲ್ಲಾ ಇದು ಸಿದ್ಧತೆ ಇದ್ದಂತೆ ಖಂಡಿತವಾಗಿಯೂ ಇದು ಒಳ್ಳೆಯ ಸೂಚನೆಯಲ್ಲ. ಇದು ಬಹಳ ದುರದೃಷ್ಟಕರ ವಿಚಾರ. ಆಲಮಟ್ಟಿ ಅಣೆಕಟ್ಟಿಗೆ ಸಂಬಂಧಿಸಿದಂತೆ ಗೇಟ್ ಕಮಿಟಿಯವರು ಎಷ್ಟು ಎತ್ತರದವರೆಗೆ ಹಾಕಬೇಕೆಂಬ ಬಗ್ಗೆ ನಿರ್ಣಯ ಮಾಡಿದ್ದಾರೆ. ಅದಕ್ಕಿಂತಲೂ ಹಿಂದೆ ಪ್ಲಾನಿಂಗ್ ಕಮಿಷನ್‌ನವರು ನಿರ್ಣಯ ಮಾಡಿರುವುದರ ಬಗ್ಗೆ ಆಂಧ್ರಪ್ರದೇಶದವರು ಆಕ್ಷೇಪ ಮಾಡುತ್ತಿದ್ದರು ಮತ್ತು ಸುಪ್ರೀಂ ಕೋರ್ಟಿನಲ್ಲಿ ಅವರ

ಪಟಿಶನ್‌ಅನ್ನು ಡಿಸ್‌ಮಿಸ್ ಮಾಡುತ್ತಾ ಬಂದರು. ಕೇಂದ್ರ ಸರ್ಕಾರ ನೇಮಿಸಿದ್ದ ಮುಖ್ಯ ಕಾರ್ಯದರ್ಶಿಯವರ ಸಮಿತಿಯು ಸುಪ್ರೀಂ ಕೋರ್ಟಿಗೆ ಯಾವಾಗ ವರದಿ ಕೊಟ್ಟಿತೋ ಅದನ್ನು ಸುಪ್ರೀಂ ಕೋರ್ಟ್ ಪುರಸ್ಕರಿಸಿತು. ಇಂತಹ ವಿವಾದಗಳ ಬಗ್ಗೆ ಪ್ರಜ್ಞೆ ಇಲ್ಲದೆ ಈ ರೀತಿಯಾಗಿ ನಾವೇ ಅಲ್ಲಿಗೆ ಹೋಗಿ ಜಾಯಿಂಟ್ ಸರ್ವೆ ಮಾಡಬೇಕೆಂದು ಹೇಳಿ ಇವೊತ್ತು ಸಿಲ್ವರ್ ಪ್ಲೇಟ್ ಮೇಲೆ ನಮ್ಮ ಕತ್ತನ್ನು ತಾವು ಕೊಟ್ಟಿದ್ದೀರಲ್ಲಾ, ಇದರ ದುಷ್ಪರಿಣಾಮ ಎಲ್ಲಿಯವರೆಗೆ ಉಂಟಾಗುತ್ತದೆ ಎಂಬುದನ್ನು ತಾವು ಆಲೋಚಿಸಬೇಕು. ಸಂಬಂಧ ಬಹಳ ಚೆನ್ನಾಗಿರಬೇಕೆನ್ನುವ ಕಾರಣಕ್ಕೆ you have opened a frontal gate of attack both from Andhra pradesh and from Maharashtra. ಅದನ್ನು ಶಮನಗೊಳಿಸುವ ಬದಲು ನೀವೇ ಅಲ್ಲಿಗೆ ಹೋಗಿ ಜಾಯಿಂಟ್ ಸರ್ವೆ ಮಾಡಬೇಕೆಂದು ಹೇಳಿ that is the evidence, what is required by the Maharashtra. ಅವರ ಟ್ರಾಪ್‌ಗೆ ಇವೊತ್ತು ತಾವು ಬಿದ್ದಿದ್ದೀರಿ. ಅವರು ಜಂಟಿ ಪರಿವೀಕ್ಷಣೆ ಮಾಡುತ್ತಾರೆ, ಸುಪ್ರೀಂ ಕೋರ್ಟ್‌ಗೆ ಇದು ಬರುವುದರಿಂದ ಅವರ ಲೀಗಲ್ ವಿವಾದಕ್ಕೆ ಇದು ಬೇಕಾಗುತ್ತದೆ. ಅವರ ವಿವಾದಕ್ಕೆ ದಾಖಲೆ ಇಲ್ಲ. ಈಗ ಅವರ ವಿವಾದ ಕೋರ್ಟ್‌ನಲ್ಲೂ ಎತ್ತಿ ಹಿಡಿಯುವುದಿಲ್ಲ. ನಮ್ಮವರು ಇದ್ದಾರಲ್ಲಾ, ಅವರು ಎಲ್ಲರ ಹತ್ತಿರ ಚೆನ್ನಾಗಿರಬೇಕೆನ್ನುವ ಕಾರಣಕ್ಕಾಗಿ, ಈ ಕುರಿತು ನಮ್ಮ ಊರಿನಲ್ಲಿ ಒಂದು ತುಳು ಗಾದೆ ಇದೆ. ಅದನ್ನು ಇಲ್ಲಿ ಹೇಳಬಾರದು. ಆ ಗಾದೆಯಂತಾಗಿದೆ ಪರಿಸ್ಥಿತಿ. ಎಲ್ಲರ ಹತ್ತಿರ ಒಳ್ಳೆಯದಾಗುವುದಕ್ಕೆ ಹೋಗಿ ಈ ರೀತಿಯ ಒಂದು ಗಂಡಾಂತರಕ್ಕೆ ಸಿಲುಕಿದ್ದೇವೆ. ಆದುದರಿಂದ, ಮೊದಲು ಮುಖ್ಯಮಂತ್ರಿಗಳು ಬರಲಿ. ಇದರಲ್ಲಿ ಅನೇಕ ವಿಚಾರಗಳಿರುವುದರಿಂದ ಅದನ್ನು ಇಲ್ಲಿ ನಾವು ಚರ್ಚೆ ಮಾಡಲು ಬಯಸುವುದಿಲ್ಲ. ಇದನ್ನು ಜಸ್ಟಿಫೈ ಮಾಡುವುದಕ್ಕೆ ನೀವು ಪುನಃ ಇನ್ನೊಂದು ಸ್ಟೇಟ್‌ಮೆಂಟ್ ಕೊಡಬೇಡಿ. ಆಲಮಟ್ಟಿ ಬಗ್ಗೆ ತಾವು ಸ್ಟೇಟ್‌ಮೆಂಟ್ ಕೊಡುತ್ತಾ ಇದೊಂದು ಐತಿಹಾಸಿಕ ಘಟನೆ ಎಂದಿದ್ದೀರಿ. ಆ ತರಹದ ಸ್ಟೇಟ್‌ಮೆಂಟನ್ನು ತಾವು ಕೊಟ್ಟಿಲ್ಲವೇ? ಅದೇ ರೀತಿ ಕಾವೇರಿ ಬಗ್ಗೆಯೂ ಐತಿಹಾಸಿಕ ಘಟನೆಯಿಂದ ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ: ನಮ್ಮ ವಿರುದ್ಧ ನಾವೇ ಎವಿಡೆನ್ಸ್ ಅನ್ನು ಕ್ರಿಯೇಟ್ ಮಾಡತಕ್ಕಂಥ ದುಸ್ಥಿತಿಗೆ ತರ್ನಾಟಕವನ್ನು ದಯವಿಟ್ಟು ತರಬೇಡಿ. ತಾವು ಮಾನ್ಯ ಮುಖ್ಯ ಮಂತ್ರಿಯವರನ್ನು ತಕ್ಷಣ ಕರೆಸಿ ಅವರು ಬಂದಾಗ ನಮ್ಮೆಲ್ಲರನ್ನೂ ಕರೆಸಲಿ, ಆಗ ವಿವರವಾಗಿ ಮಾತನಾಡೋಣ, ಅದರ ಬಗ್ಗೆ ಸದನದಲ್ಲಿ ಮಾತನಾಡುವುದಿಲ್ಲ. ಈ ಬಗ್ಗೆ ನೀವು ಬಹಳ ಎಚ್ಚರಿಕೆ ವಹಿಸಬೇಕು. ಈಗಾಗಲೇ ಒಂದು ಹೆಜ್ಜೆ ತಪ್ಪಿದ್ದೀರಿ, ಇನ್ನೊಂದು ಹೆಜ್ಜೆ ಇಡಲು ಹೋದರೆ ಮುಗ್ಗರಿಸಿ ಬೀಳುತ್ತೀರಿ. ಆ ರೀತಿ ಮುಗ್ಗರಿಸಿ ಬೀಳುವುದಕ್ಕೆ ನೀವು ಇನ್ನೊಂದು ಕಾರ್ಯಕ್ರಮವನ್ನು ದಯಮಾಡಿ ಮಾಡಬೇಡಿ. It will not get a goodwill of anybody.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರು ಮಾತನಾಡುತ್ತಾ ಜಾಯಿಂಟ್ ಸರ್ವೆ ಮಾಡುವುದಕ್ಕೆ ನೀವು ಒಪ್ಪಿಕೊಂಡು ಬಂದಿದ್ದೀರೆನ್ನುವ ಮಾತನ್ನು ಹೇಳಿದರು. ನಾವು ಜಾಯಿಂಟ್ ಸರ್ವೆ ಮಾಡುವುದಕ್ಕೆ ಸೆಂಟ್ರಲ್ ವಾಟರ್ ಕಮೀಷನ್‌ನವರು ಈ ಹಿಂದೆಯೇ 2-3 ಸಭೆಗಳನ್ನು ನಡೆಸಿ ಫೆಬ್ರವರಿ ತಿಂಗಳಿನಿಂದಲೇ ಜಾಯಿಂಟ್ ಸರ್ವೆ ಮಾಡಿದರೆ ರಿಯಾಲಿಟಿ ಗೊತ್ತಾಗುತ್ತದೆನ್ನುವ ಕಾರಣಕ್ಕೆ ಸರ್ವೆ ಕಾರ್ಯವನ್ನು ಪ್ರಾರಂಭಿಸಲಾಗಿ ಈಗಾಗಲೇ ಶೇಕಡಾ 80ರಷ್ಟು ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಅದನ್ನು ನಿನ್ನೆ ಒಪ್ಪಿಕೊಂಡು ಬಂದಿದ್ದಲ್ಲ. ಜಾಯಿಂಟ್ ಸರ್ವೆ ಮಾಡದೆ ಹೋದರೆ ರಿಯಾಲಿಟಿ ಗೊತ್ತಾಗುವುದಿಲ್ಲವೆನ್ನುವ ದೃಷ್ಟಿಯಿಂದ ಫೆಬ್ರವರಿ ತಿಂಗಳಿನಿಂದ ಸದರಿ ಸರ್ವೆ ಕಾರ್ಯ ನಡೆಯುತ್ತಿದೆ. ಆಲಮಟ್ಟಿಯಿಂದ ಹಿಪ್ಪರಗಿವರೆಗೆ ಮತ್ತು ಹಿಪ್ಪರಗಿಯಿಂದ ಸಾಂಗ್ಲಿವರೆಗೆ ಜಂಟಿ ಸರ್ವೆ ಕಾರ್ಯ ನಡೆಯುತ್ತಿದೆ. ಈಗಾಗಲೇ 26 ಕ್ರಾಸ್ ಸೆಕ್ಷನ್‌ಗಳನ್ನು ಪೂರ್ತಿಗೊಳಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಬಂದ ನಂತರ ಎಲ್ಲರೂ ಕುಳಿತು ಮಾತನಾಡೋಣ. ಇದು ನಿನ್ನೆ ಆಗಿರುವ ತೀರ್ಮಾನವೆಂದು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಲು ಇಷ್ಟಪಡುತ್ತೇನೆ.

2) ಕರ್ನಾಟಕ-ಮಹಾರಾಷ್ಟ್ರ ಗಡಿ ಸಮಸ್ಯೆ ಕುರಿತು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೆ 14ನೇ ತಾರೀಖಿನಂದು ಗಡಿ ಸಮಸ್ಯೆ ಬಗ್ಗೆ ಮಾತುಕತೆಯಾಡುತ್ತೇವೆಂದು ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿಯವರು ಹೇಳಿದ್ದಾರೆ. ಈ ಕುರಿತು ಮಾತುಕತೆ ಸಾಧ್ಯವಿಲ್ಲ. ಗಡಿ ಸಮಸ್ಯೆ ಬಗ್ಗೆ ಮಾತುಕತೆ ಎಂದಿಗೂ ಆಗುವುದಿಲ್ಲ. ಈಗಾಗಲೇ ಈ ಬಗೆಗಿನ ಮಾತುಕತೆ ಮುಗಿದು ಹೋಗಿ, ಮಹಾಜನ್ ವರದಿಯೇ ಅಂತಿಮವೆಂದು ತೀರ್ಮಾನವಾದ ಬಳಿಕ ಮತ್ತೊಮ್ಮೆ ಮಾತುಕತೆಯ ಪ್ರಶ್ನೆಯೇ ಬರುವುದಿಲ್ಲ. ಈಗ ಪುನಃ 14ನೇ ತಾರೀಖಿನಂದು ಮಾತುಕತೆಯಾಡುತ್ತೇವೆಂದರೆ ನೀವು ಮತ್ತೆ ಅದನ್ನು ಪ್ರಸ್ತಾಪಿಸಿದಂತಾಯಿತು. ಈಗ ಉಳಿದಿರುವುದು ಒಂದೇ, ಅದು ಲೋಕಸಭೆಯಲ್ಲಿದ್ದು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಮಹಾಜನ್ ವರದಿಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲು ಹೇಳಬೇಕೇ ಹೊರತು ಅದು ಬಿಟ್ಟು ಗಡಿ ವಿವಾದವನ್ನು ಮತ್ತೆ ಕೆದಕುವುದಕ್ಕೆ ಸಾಧ್ಯವಿಲ್ಲ. 14ನೇ ತಾರೀಖಿನಂದು ಗಡಿ ಸಮಸ್ಯೆ ಕುರಿತು ಮಾತುಕತೆಯಾಡುವುದಾಗಿ ಇವೊತ್ತಿನ ಪತ್ರಿಕೆಗಳಲ್ಲಿ ವರದಿಯಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ(ಗೃಹ ಸಚಿವರು) :— ನಾನು ತಮ್ಮ ಆತಂಕವನ್ನು ಅರ್ಥ ಮಾಡಿಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಕುರಿತು ಬಹಳ ಕ್ಲಿಯರ್ ಆಗಿದ್ದಾರೆ. ಗಡಿ ಸಮಸ್ಯೆ ಬಗ್ಗೆ ಈ ಸದನದ ತೀರ್ಮಾನ ಮತ್ತು ನಮ್ಮ ರಾಜ್ಯದ ಜನತೆಯ ತೀರ್ಮಾನವೇನಿದೆ, ಮಹಾಜನ್ ವರದಿಯಿಂದ ಹಿಂದೆ ಸರಿಯುವ ಪ್ರಶ್ನೆಯೇ